2.	ಬಂಟ್ವಾಳ ತಾಲ್ಲೂಕು	ಇಲ್ಲ.
3.	ಪುತ್ತೂರು ತಾಲ್ಲೂಕು	ಇಲ್ಲ.
4.	ಬೆಳ್ತಂಗಡಿ ತಾಲ್ಲೂಕು	ಇಲ್ಲ.
5.	ಸುಳ್ಯ ತಾಲ್ಲೂಕು	ಇಲ್ಲ.
	ಒಟ್ಟು	**13**

ಇ) ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಅನುಗುಣವಾಗುವಂತೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸಲು ಸರ್ಕಾರಿ ಪತ್ರ. ಸಂ. ಸಿಎಂಡಬ್ಲ್ಯೂ :74 :ಸಿಆರ್‌ಸಿ : 96, ದಿನಾಂಕ: 20.3.97ರಲ್ಲಿ ಅನುಮತಿ ನೀಡಿದೆ.

ಹಾಸನ ಜಿಲ್ಲೆಯಲ್ಲಿ ಖಾಯಂ ಸಾಗುವಳಿ ಪತ್ರ ವಿತರಣೆ

3019 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮದಡಿಯಲ್ಲಿ ಸುಮಾರು 20-30 ವರ್ಷದ ಹಿಂದೆ ಹಂಗಾಮಿ ಸಾಗುವಳಿ ಪತ್ರ ವಿತರಿಸಿದ್ದು, ಸಾಗುವಳಿದಾರರಿಗೆ ಇಂದಿನವರೆವಿಗೂ ಖಾಯಂ ಸಾಗುವಳಿ ಪತ್ರ ನೀಡದೆ ಶಾಶ್ವತ ಭೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಲು ಸಂಬಂಧಿಸಿದ ರೈತರಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?*

ಆ) *ಸರ್ಕಾರ ಖಾಯಂ ಸಾಗುವಳಿ ಪತ್ರ ನೀಡಲು ಕ್ರಮ ತೆಗೆದುಕೊಳ್ಳುವುದೆ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಪರಿಶೀಲಿಸಲಾಗುತ್ತಿದೆ.

ಆಲಮಟ್ಟಿ ಸಂತ್ರಸ್ತರಿಗೆ ಉದ್ಯೋಗ

3020 - ಶ್ರೀ ರಾಜಶೇಖರ ವಿ. ಶೀಲವಂತ (ಗುಳ್ಳೇದಗುಡ್ಡ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣ ಮೇಲ್ದಂಡೆ ಯೋಜನೆಯಡಿ ಮುಳುಗಡೆ ಹೊಂದಿದ ಊರುಗಳ ಪುನರ್ವಸತಿ ಕೇಂದ್ರಗಳ ಹತ್ತಿರ ಸಣ್ಣ ಕೈಗಾರಿಕೆ ಪ್ರಾರಂಭಿಸಿ ನಿರ್ಗತಿಕ ಜನರಿಗೆ ಉದ್ಯೋಗ ಒದಗಿಸುವ ಯೋಜನೆಯು ಸರ್ಕಾರದ ಮುಂದಿದೆಯೇ?*

ಆ) *ಹಾಗಿದ್ದಲ್ಲಿ ಕೈಗಾರಿಕೆ ಶುರು ಮಾಡಲಾಗಿದೆಯೇ? (ಅವು ಎಲ್ಲೆಲ್ಲಿವೆ).*

ಇ) *ಇರದಿದ್ದರೆ ಆ ಜನರ ಬದುಕಿಗೆ ಬೇರೆ ದಾರಿ ಏನು?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಹೌದು.

ಆ) ಯೋಜನಾ ಬಾಧಿತ ಕುಟುಂಬಗಳ ಉದ್ಯೋಗ ಸಮಸ್ಯೆ ಪರಿಹರಿಸುವ ಸಲುವಾಗಿ ಅವರುಗಳಿಗೆ ಆದಾಯ ಉತ್ಪಾದನಾ ಯೋಜನೆಗಾಗಿ ರೂ.20,000.00 ಮಂಜೂರು ಮಾಡಲಾಗುತ್ತಿದೆ. ಪ್ರತಿ ಪುನರ್ವಸತಿ ಕೇಂದ್ರದಲ್ಲಿ ಕೈಗಾರಿಕಾ ಸ್ಥಾಪನೆಗಾಗಿ ಸ್ಥಳವನ್ನು ಕಾಯ್ದಿರಿಸಲಾಗಿದೆ. ಈಗಾಗಲೇ ಕೆಲವು ಪುನರ್ವಸತಿ ಕೇಂದ್ರಗಳಲ್ಲಿ ತರಬೇತಿ ಮತ್ತು ಉದ್ಯೋಗ ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಉದಾಹರಣೆಗೆ, ರಾಮಪುರ, ಗಣಿ ಪುನರ್ವಸತಿ ಕೇಂದ್ರಗಳಲ್ಲಿ ಖಾದಿ ನೂಲಿನ ಘಟಕವನ್ನು ಸ್ಥಾಪಿಸಲಾಗಿದೆ. ಬೆಣ್ಣೂರು, ಗುಳಬಾಳ ಶಿರಗುಪ್ಪಿ ಹೊದ್ಲೂರು ಮತ್ತು ರಾಮಪುರಗಳಲ್ಲಿ ಮಹಿಳೆಯರ ಹಾಲು ಉತ್ಪಾದನಾ ಸಹಕಾರ ಸಂಘಗಳನ್ನು ಸ್ಥಾಪಿಸಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಕೃಷಿಯೇತರ ಯೋಜನೆಗಳಿಗೆ ಮಂಜೂರು ಮಾಡಿದ ಸಾಲದ ಬಗ್ಗೆ

3021 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ, ಬ್ಯಾಂಕ್ ನಿಯಮಿತ, ಗುಲ್ಬರ್ಗಾ, ಇವರು ವ್ಯವಸಾಯೇತರ ವಿಭಾಗದಲ್ಲಿ ಭಾರಿ ಮೊತ್ತದ ಸಾಲಗಳನ್ನು ಮಂಜೂರ್ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಒಟ್ಟು ಮಂಜೂರ್ಮಾಡಿದ ಸಾಲ ಹಾಗೂ ಈ ಪೈಕಿ ಈಗಿನವರೆಗೆ ವಸೂಲಾಗಿರುವ ಸಾಲ, ವಸೂಲಾಗದಿದ್ದಲ್ಲಿ ಭಾರಿ ಮೊತ್ತದ ಸಾಲದ ವಸೂಲಾತಿಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಬಂದಿದೆ.

ಆ) 1986-87ರಿಂದ 31.3.97ರವರೆಗೆ ರೂ. 212.32 ಲಕ್ಷಗಳ ಸಾಲವನ್ನು 457 ಫಲಾನುಭವಿಗಳಿಗೆ ಮಂಜೂರ್ಮಾಡಲಾಗಿದೆ. 31.3.97ಕ್ಕೆ ರೂ.76.02 ಲಕ್ಷ ತಗಾದೆ ಪೈಕಿ ರೂ.11.59 ಲಕ್ಷ ಸಾಲ ವಸೂಲಾಗಿದ್ದು, ರೂ. 64.43 ಲಕ್ಷ ಬಾಕಿ ಇರುತ್ತದೆ. 419 ಪ್ರಕರಣಗಳಿಗೆ ಸುಸ್ತಿ ಮೊಬಲಗನ್ನು ರೂ.64.43 ಲಕ್ಷಗಳಿಗೆ ಕಾನೂನು ಅನ್ವಯ ಜರುಗಿಸಲು ನೋಟೀಸ್‌ಗಳನ್ನು ಜಾರಿ ಮಾಡಲಾಗಿದೆ.

ಧಾರ್ಮಿಕ ದತ್ತಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ

3025 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಮುಜರಾಯಿ ರಾಜ್ಯ ಸಚಿವರು